ಓ.ಎಸ್. ನಂ. 53/2019

ಪಿ.ಡಬ್ಲ್ಯು಼ 01

ದಿನಾಂಕಃ 30.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ JKR ವಕೀಲರಿಂದ.

ನನ್ನ ಗಂಡ ನಾಗರಕೊಂಡ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 428 ರ ವಿಸ್ತೀರ್ಣ 4 ಎಕರೆ ಇರುತ್ತದೆ. ನಾವು ಕೇಸನ್ನು 4 ಎಕರೆಗೆ ನೀಡಿರುತ್ತೇವೆ. ದಾವಾ ಸ್ವತ್ತನ್ನು ಕೊಟ್ಟುರುಗೌಡ ಅವರು ಉಳುಮೆ ಮಾಡುತ್ತಿದ್ದಾರೆ ಎಂದರೆ ನಾವು ಉಳುಮೆ ಮಾಡುತ್ತಿದ್ದೇವೆ. ದಾವಾ ಸ್ವತ್ತಿನ ಪೂರ್ವಕ್ಕೆ ನಾಗನಗೌಡರ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ ಮರಿಯಮ್ಮ ಅವರ ಜಮೀನು ಇದೆ ಎಂದರೆ ಸಾವಿತ್ರಮ್ಮ ಅವರ ಜಮೀನು ಇದೆ. ಉತ್ತರಕ್ಕೆ ಅಯ್ಯಪ್ಪ ಅವರ ಜಮೀನು ಇದೆ ಎಂದರೆ ಬಸಯ್ಯ ಅವರ ಜಮೀನು ಇದೆ. ದಕ್ಷಿಣಕ್ಕೆ ಮಳಿಯಪ್ಪ, ಹುಚ್ಚಪ್ಪ, ಹುಚ್ಚಂಗೆಪ್ಪ ಅವರ ಜಮೀನು ಇದೆ ಎಂದರೆ ಸರಿ. ವಾದಪತ್ರದಲ್ಲಿ ಹೇಳಿರುವ ಚೆಕ್‌ಬಂದಿಯನ್ನು ನಾನು ಹೇಳಬಹುದು. ಮೇಲೆ ಹೇಳಿದ ಚೆಕ್ಬಂದಿಯೇ ದಾವಾ ಸ್ವತ್ತಿನ ಚೆಕ್‌ಬಂದಿ. ಚೆಕ್‌ಬಂದಿಯನ್ನು ಈಗ ಇರುವ ಹೊಲದ ಆಜುಬಾಜುದಾರರ ಹೆಸರಿನ ಮೇಲೆ ಹೇಳಿರುತ್ತೇನೆ. ನಾನು ಪ್ರತಿವಾದಿಗಳ ಖರೀದಿ ಪತ್ರದ ಆಧಾರದ ಮೇಲೆ ಚೆಕ್‌ಬಂದಿಯನ್ನು ನನ್ನ ವಕೀಲರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿಗಳು 1985 ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಮಾಡಿಲ್ಲ. 1985 ರ ನೊಂದಾಯಿತ ಕ್ರಯ ಪತ್ರದಲ್ಲಿರುವ ಚೆಕ್‌ಬಂದಿಯನ್ನು ನಾನು ವಾದಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಯಾವುದೇ ಆಸ್ತಿಯನ್ನು ಮಾರಿರುವುದಿಲ್ಲ. ನಾನು ಮೇಲೆ ಹೇಳಿದ ಚೆಕ್‌ಬಂದಿಯವರು 1985 ರಲ್ಲಿ ಇದ್ದ ಆಜುಬಾಜುದಾರರ ಈಗ ಅವರ ಇರುವುದಿಲ್ಲ ಎಂದರೆ ಇದ್ದಾರೆ. ಈ ವಿಚಾರ ನನಗೆ ಗೊತ್ತಿದ್ದರು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಖರೀದಿ ಮಾಡಿರುವ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ, ಸಾಕ್ಷಿ ಮುಂದುವರೆದು ನಾನು ಯಾವುದೇ ಆಸ್ತಿಯನ್ನು ಮಾರಿರುವುದಿಲ್ಲ. ಪ್ರತಿವಾದಿಗಳು 1985 ನೇ ಇಸವಿಯಲ್ಲಿ ಜಮೀನನ್ನು ಖರೀದಿ ಮಾಡಿದ ನಂತರ ಈಗಿನವರೆಗೂ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಕುಟುಂಬಸ್ಥರು ದಾವಾ ಸ್ವತ್ತಿನ ಸ್ವಾಧೀನದಲ್ಲಿಲ್ಲ ಎಂದರೆ ಸುಳ್ಳು. ನನ್ನ ಹೆಸರು ಮಾದಿಗರ ಮಾಳಗಿ ದುರ್ಗಮ್ಮ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ

ದಾಖಲಾತಿಯನ್ನು ಸಲ್ಲಿಸಿರುತ್ತೇನೆ. ಅದು ಯಾವ ದಾಖಲಾತಿ ಎಂದು ನನಗೆ ಗೊತ್ತಿಲ್ಲ. ನನ್ನ ತವರು ಮನೆ ನಾಗರಕೊಂಡ ಗ್ರಾಮ ಆಗಿರುತ್ತದೆ. ಮಾಳಗಿ ಎಂಬುವುದು ನನ್ನ ಗಂಡನ ಮನೆಯ ಹೆಸರಾಗಿರುತ್ತದೆ. ಮದುವೆ ನಂತರ ನಾನು ನಾಗರಕೊಂಡ ಗ್ರಾಮದಲ್ಲಿ ವಾಸಿಸುತ್ತಿದ್ದೆನೆ ಎಂದರೆ ನಾನು ಯಾವತ್ತೂ ಸಹ ಅಲ್ಲಿ ವಾಸ ಮಾಡಿಲ್ಲ. ನನ್ನ ಪತಿ ಮೃತಪಟ್ಟು 30 ವರ್ಷ ಆಗಿರುತ್ತದೆ. ನನ್ನ ಗಂಡನ ಹೆಸರು ಮಾದಿಗರ ಮಾಳಗಿ ಭರಮಪ್ಪ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿರುತ್ತೇನೆ. ಆ ರೀತಿ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಮಾದಿಗರ ಮಾಳಗಿ ದುರ್ಗಮ್ಮ ಹಾಗೂ ನನ್ನ ಪತಿಯನ್ನು ಮಾದಿಗರ ಮಾಳಗಿ ಭರಮಪ್ಪ ಎಂದು ಕರೆಯುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ತಂದೆಯ ಹೆಸರು ದುರ್ಗಪ್ಪ. ಆತನ ತಾಯಿಯ ಹೆಸರು ಫಕೀರಮ್ಮ. ನನ್ನ ಗಂಡನಿಗೆ ಇಬ್ಬರು ಅಕ್ಕತಂಗಿಯರು ಇದ್ದು ಅವರು ಈಗ ಮೃತಪಟ್ಟಿರುತ್ತಾರೆ. ಅವರಿಗೆ ಇಬ್ಬರು ಮಕ್ಕಳಿದ್ದು ಒಬ್ಬ ಈಗ ಮೃತಪಟ್ಟಿದ್ದು ಇನ್ನೊಬ್ಬ ಜೀವಂತ ಇದ್ದಾನೆ. ಅವನನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಮೃತಪಟ್ಟ ಬಸವರಾಜಪ್ಪ ಅವರಿಗೆ ಹೆಂಡತಿ ಮಕ್ಕಳು ಇದ್ದಾರೆ. ಅವರನ್ನು ಸಹ ನಾನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನನ್ನ ಮಾವನ ಒಡಹುಟ್ಟಿದವರ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ನನ್ನ ಪತಿಗೆ ಅವರ ಪೂರ್ವಜರ ಕಡೆಯಿಂದ ಬಂದಿರುತ್ತದೆ. ಅವರ ಹೆಸರು ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ 4 ಎಕರೆ ಆಸ್ತಿ ಮಾತ್ರ ಬಂದಿರುತ್ತದೆ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಸರ್ವೆ ನಂಬರ್ 428 ಎ/1 ರ 3 ಎಕರೆ ಜಾಗ ಇದೆ ಎಂದರೆ ಸರಿ. ಅದು ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಾಗದಲ್ಲಿ ನಾವು ಉಳುಮೆ ಮಾಡಿರುವುದಿಲ್ಲ. ಸದರಿ ಜಾಗದಲ್ಲಿ ಮರಿಯಮ್ಮ ಅವರು ಉಳುಮೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಅಸಲು ದಾವೆ ಸಂಖ್ಯೆ 152/08 ರಂತೆ ಮರಿಯಮ್ಮ ಅವರ ವಿರುದ್ಧ ಒತ್ತುವರಿ ಮಾಡಿದ ಕಾರಣ ದಾವೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಹಾಲಪ್ಪರವರು ಸಹ ಪಕ್ಷಗಾರರಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಅವರಿಗ ಸೇರಿದ ಸರ್ವೆ ನಂಬರ್ 428/ಎ2 ರ 4 ಎಕರೆ 52 ಸೆಂಟ್ಸ ಜಾಗದ ಬಗ್ಗೆ ಅಸಲು ದಾವೆ ಸಂಖ್ಯೆ 152/08 ರಂತೆ ಮರಿಯಮ್ಮ ಹಾಗೂ ಹಾಲಪ್ಪರವರ ವಿರುದ್ಧ ದಾವೆಯನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ಜಾಗ ನನ್ನದಾಗಿರುತ್ತದೆ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ಸುಮಾರು 50 ವರ್ಷಗಳಿಂದ ಇದ್ದೇನೆ. ಅದರ ಸಂಬಂಧ ನಾನು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಯಾವ ದಾಖಲಾತಿ ಹಾಕಿರುತ್ತೇನೆ ಅದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಮಾಲೀಕರು ನಾವಾಗಿರಲಿಲ್ಲ ಅದರ ಸ್ವಾಧೀನದಲ್ಲಿ ನಾವು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಸ್ವಾಧೀನದಲ್ಲಿ ಯಾವುದೇ

ಓ.ಎಸ್. ನಂ. 53/2019

ಪಿ.ಡಬ್ಲ್ಯು: 01

ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಅದು ನನ್ನ ಗಂಡನ ಹೆಸರಿನಲ್ಲಿದೆ. ಅದು ಇಂದಿಗೂ ನನ್ನ ಪತಿಯ ಹೆಸರಿನಲ್ಲಿದೆ. ನಾನು ಪ್ರತಿವಾದಿಗಳು ಬಂದು ತೊಂದರೆ ಮಾಡುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಕುಟುಂಬದ ಸ್ವತ್ತು ಆಗದೇ ಇದ್ದರು ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.